ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ

ದಿನಾಂಕಃ27.12.2007 ರಂದು ರೂ. 3 ಲಕ್ಷ ಹಣವನ್ನು ಪ್ರತಿವಾದಿ 1 ಚೋಳೂರಪ್ಪ, ಮುನಿತಿಮ್ಮಯ್ಯ ಮತ್ತು ತಾಯಮ್ಮನವರಿಗೆ ಕೊಟ್ಟಿರುವುದಾಗಿ ತಿಳಿಸಿದ್ದು ಅದನ್ನು ಆ ದಿನ ಯಾವ ಸಮಯದಂದು ನೀಡಿರುತ್ತೇನೆ ಎಂದು ಅದು ನನಗೆ ಗೊತ್ತಿಲ್ಲ. ಸದರಿ 3 ಲಕ್ಷವನ್ನು ಹಣವನ್ನು ಮೇಲೆ ಹೇಳಿದ ಮೂರು ಜನರಿಗೆ ನೀಡುವ ಸಮಯದಲ್ಲಿ ಅವರನ್ನು ಹೊರತು ಪಡಿಸಿ ಬೇರೆ ಯಾರು ಇದ್ದರು ಎಂದು ನನಗೆ ಈಗ ನೆನಪಿಲ್ಲ. ಸದರಿ ರೂ. 3 ಲಕ್ಷ ಹಣವನ್ನು ಚೋಳೂರಪ್ಪನವರಿಗೆ ಮಾತ್ರ ನೀಡಲಾಗಿತ್ತು. ನಾನು ಹೇಳಿರುವಂತೆ ರೂ. 3 ಲಕ್ಷ ಹಣವನ್ನು ನೀಡಿರುವುದಿಲ್ಲ ಆದರೂ ಸಹ ನಾನು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರೂ. 3 ಲಕ್ಷ ಹಣವನ್ನು ಅವರು ಯಾವ ಕಾರಣಕ್ಕಾಗಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಅವರಿಗೆ ಹಣದ ಅವಶ್ಯಕತೆ ಇದ್ದು ಬೇಕು ಎಂದಿದ್ದರು ಅದಕ್ಕೆ ನೀಡಿದ್ದೆನು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಅವರನ್ನು ಯಾವ ಕಾರಣಕ್ಕಾಗಿ ಹಣ ಅವಶ್ಯಕತೆ ಇದೆ ಎಂದು ಅವರಲ್ಲಿ ಕೇಳಿರುತ್ತೇನೆ ಆದರೆ ಅವರು ಹಣದ ಅವಶ್ಯಕತೆ ಇರುತ್ತದೆ ಎಂದು ಮಾತ್ರ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವ ರೀತಿಯಲ್ಲಿ ಅವರಿಗೆ ಯಾವುದೇ ಹಣದ ಅವಶ್ಯಕತೆ ಇರಲೇ ಇಲ್ಲ ಆದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿರುವಂತೆ ರೂ. 3 ಲಕ್ಷ ಹಣವನ್ನು ಚೋಳೂರಪ್ಪ, ಮುನಿತಿಮ್ಮಯ್ಯ ಮತ್ತು ತಾಯಮ್ಮನವರಿಗೆ ನೀಡಿದ ನಂತರ ಪುನಃ ಮತ್ತೆ ಹಣ ಬೇಕೆಂದು ನನ್ನಲ್ಲಿ 2010 ರಲ್ಲಿ ಕೇಳಿರುತ್ತಾರೆ. ಅವರು ದಿನಾಂಕಃ27.12.2010 ರಲ್ಲಿ ಕೇಳಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಮೇಲೆ ಹೇಳಿದವರು ದಾವಾ ಆಸ್ತಿಯ ಸ್ಕೆಚ್ಚನ್ನು ಮಾಡಿಸಲು ಹಣದ ಅವಶ್ಯಕತೆ ಇರುತ್ತದೆ ಎಂದು ಕೇಳಿರುತ್ತಾರೆಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಿಪಿ-1 ರ ಷರದಲ್ಲಿ ಬರೆಸಿರುತ್ತೇನೆ. ಸದರಿ ದಿನದಂದು ಚೋಳೂರಪ್ಪನವರಿಗೆ ರೂ. 1 ಲಕ್ಷ 37 ಸಾವಿರ ಹಣವನ್ನು ನೀಡಿರುತ್ತೇನೆ. ಸದರಿ ಹಣವನ್ನು ನಾವು 5 ಜನ ವಾದಿಗಳು ಸೇರಿ ಸಮವಾಗಿ ನೀಡಿರುತ್ತೇವೆ. ಸದರಿ ಹಣವನ್ನು ರಾಜಾ ಮಾರುಕಟ್ಟೆ ವಾದಿ 3 ರವರ ಅಂಗಡಿಯಲ್ಲಿ ಮಧ್ಯಾಹ್ನದ ಸಮಯದಲ್ಲಿ ನೀಡಿರುತ್ತೇವೆ. ಸದರಿ ಹಣವನ್ನು ಕೊಟ್ಟ ಬಗ್ಗೆ ಯಾವ ಕಾರಣಕ್ಕಾಗಿ ಕೊಟ್ಟಿರುತ್ತೇನೆ ಎಂದು ನೋಟೀಸಿನಲ್ಲಿ ಕಾರಾರು ಪತ್ರದಲ್ಲಿ ನೋಟಿಸಿನಲ್ಲಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ಹಣವನ್ನು ನೀಡುವ ಸಮಯದಲ್ಲಿ ನಾವು 5 ಜನ ವಾದಿಗಳು ಇದ್ದೆವು. ನಮ್ಮನ್ನು ಬಿಟ್ಟರೆ ಆ ಸಮಯದಲ್ಲಿ ಚೋಳೂರಯ್ಯನವರ ಮಗ ಗಂಗಾಧರಯ್ಯನವರು ಅಂದರೆ ಪ್ರತಿವಾದಿ 5 ಇದ್ದರು. ಅವರನ್ನು ಹೊರತುಪಡಿಸಿ ಬೇರೆಯವರು ಇದ್ದ ಬಗ್ಗೆ ನನಗೆ ಈಗ ನೆನಪಿಲ್ಲ. ಸದರಿ ಮೇಲೆ ಹೇಳಿದ ವಿಚಾರಗಳನ್ನು ನಿಪಿ-1 ಕರಾರುಪತ್ರದಲ್ಲಿ ಹೇಳಿ ಬರೆಸಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.